**ಕರ್ನಾಟಕ ಸರ್ಕಾರ, ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ,**
**ಐವಾನ್-ಎ-ಶಾಹಿ ಬಡಾವಣೆ ಕಲಬುರಗಿ**

ಸಂಖ್ಯೆ: ಸಿ1(1)ಆಡಳಿತ/ಪಸಹುದ್ದೆ/ಬಡ್ತಿ/135/2022-23 ದಿನಾಂಕ: 16/02/2024

**ಅಧಿಸೂಚನೆ**

ವಿಷಯ: ಶಾಲಾ ಶಿಕ್ಷಣ ಇಲಾಖೆಯ ಕಲಬುರಗಿ ಆಯುಕ್ತಾಲಯದ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪತ್ರಾಂಕಿತ ವ್ಯವಸ್ಥಾಪಕರು/ ಸಹಾಯಕ ನಿರ್ದೇಶಕರುಗಳಿಗೆ, ಪತ್ರಾಂಕಿತ ಸಹಾಯಕರ ಹುದ್ದೆಗೆ ನಿಯಮ-32ರಡಿ ಬಡ್ತಿ ನೀಡುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ 250 ಡಿಪಿಐ 2006 ದಿನಾಂಕ: 22/02/2008.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 464 ಡಿಪಿಐ 2008 ದಿನಾಂಕ: 06/01/2009.
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೆಹಿಮ 2022 ದಿನಾಂಕ: 28/12/2022.
4. ಈ ಕಛೇರಿ ಅಧಿಸೂಚನೆ ಸಂಖ್ಯೆ: ಸಿ1(1)/ಆಡಳಿತ/ಪವ್ಯ/ಜೇಪಟ್ಟಿ/115/2022-23 ದಿನಾಂಕ: 13/07/2023.
5. ದಿನಾಂಕ: 02/02/2024 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭಾ ನಡುವಳಿಗಳು.
6. ಈ ಕಛೇರಿ ಸಮ ಸಂಖ್ಯೆ ಜ್ಞಾಪನ ದಿನಾಂಕ: 03/02/2024.

>><><><><<

ಉಲ್ಲೇಖ (4)ರ ಈ ಕಛೇರಿಯ ಅಧಿಸೂಚನೆಯನ್ವಯ ಶಾಲಾ ಶಿಕ್ಷಣ ಇಲಾಖೆಯ ಕಲಬುರಗಿ ಆಯುಕ್ತಾಲಯದ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪತ್ರಾಂಕಿತ ವ್ಯವಸ್ಥಾಪಕರು/ ಸಹಾಯಕ ನಿರ್ದೇಶಕರುಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ. ಉಲ್ಲೇಖ (1) ಮತ್ತು (2) ರಲ್ಲಿನ ಸರ್ಕಾರದ ಆದೇಶ/ ಸುತ್ತೋಲೆಗಳನ್ವಯ ಪ್ರತ್ಯಾಯೋಜಿಸಿದ ಅಧಿಕಾರದಂತೆ ಪ್ರಸ್ತುತ, ವಿಭಾಗದಲ್ಲಿ ಖಾಲಿ ಇರುವ ಪತ್ರಾಂಕಿತ ಸಹಾಯಕರ ಹುದ್ದೆಗಳ ಪೈಕಿ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958ರ ನಿಯಮ 32ರಡಿ 01 ಪತ್ರಾಂಕಿತ ಸಹಾಯಕರ ಹುದ್ದೆಗೆ ಸ್ವತಂತ್ರ ಪ್ರಭಾರದಲ್ಲಿರಿಸಿ ಬಡ್ತಿ ನೀಡಲು ಉಲ್ಲೇಖ (5)ರ ದಿನಾಂಕ: 02/02/2024 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಮುಂದುವರೆದು, ಉಲ್ಲೇಖ (6)ರ ಈ ಕಛೇರಿ ಜ್ಞಾಪನದನ್ವಯ ನಿಯಮ 32ರಡಿ ಸ್ವತಂತ್ರ ಪ್ರಭಾರದಲ್ಲಿರಿಸಿದ ಈ ಕೆಳಕಂಡ ಅಧಿಕಾರಿಗಳಿಗೆ ಸ್ಥಳ ನಿಯುಕ್ತಿಗೊಳಿಸುವ ಹಿನ್ನಲೆಯಲ್ಲಿ ದಿನಾಂಕ: 16/02/2024 ರಂದು ಕೌನ್ಸಿಲಿಂಗ್ ನಿಗಧಿಪಡಿಸಿ ಸ್ಥಳ ಆಯ್ಕೆ ಮಾಡಿಕೊಳ್ಳಲು ತಿಳಿಸಲಾಗಿತ್ತು. ಸದರಿ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ತೀರ್ಮಾನಿಸಿದಂತೆ ಹಾಗೂ ಪ್ರಚಲಿತ ಸರ್ಕಾರದ ನಿಯಮಗಳು, ಜೇಷ್ಠತೆ ಹಾಗೂ ಮೀಸಲಾತಿಯನ್ವಯ ಅರ್ಹತೆ ಹೊಂದಿದ ಈ ಕೆಳಕಂಡ ಪತ್ರಾಂಕಿತ ವ್ಯವಸ್ಥಾಪಕರು/ ಸಹಾಯಕ ನಿರ್ದೇಶಕರಿಗೆ ವೇತನ ಶ್ರೇಣಿ ರೂ. **43100-1100-46400-1250-53900-1450-62600-1650-72500-1900-83900** ರಡಿಯಲ್ಲಿ ಪತ್ರಾಂಕಿತ ಸಹಾಯಕರ ಹುದ್ದೆಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958ರ ನಿಯಮ 32ರಡಿ ಸ್ವತಂತ್ರ ಪ್ರಭಾರದಲ್ಲಿರಿಸಿ ಬಡ್ತಿ ನೀಡಿ, ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಲಾಗಿದೆ.

| ಕ್ರಮ ಸಂಖ್ಯೆ | ಜೇಷ್ಠತಾ ಸಂಖ್ಯೆ | ವೃಂದ | ಅಧಿಕಾರಿಯ ಹೆಸರು, ಹುದ್ದೆ ಮತ್ತು ಕಾರ್ಯನಿರ್ವಹಿಸುತ್ತಿರುವ ಸ್ಥಳ | ನಿಯಮ-32ರಡಿ ಪತ್ರಾಂಕಿತ ಸಹಾಯಕರ ಹುದ್ದೆಯಲ್ಲಿ ಸ್ಥಳ ನಿಯುಕ್ತಿಗೊಳಿಸಿದ ಕಛೇರಿ |
|---|---|---|---|---|
| 1 | 47 | ಸ್ಥಳೀಯ ವೃಂದ | ಶ್ರೀ ಪ್ರಕಾಶ ಟಾಳೆ,<br>ಪತ್ರಾಂಕಿತ ವ್ಯವಸ್ಥಾಪಕರು,<br>ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ,<br>ಬೀದರ ಜಿ: ಬೀದರ. | ಪತ್ರಾಂಕಿತ ಸಹಾಯಕರು,<br>ಉಪ ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ ಕಲಬುರಗಿ. |

**ಷರತ್ತುಗಳು:**

1. ಸದರಿ ಆದೇಶವು ಗೌ: ಉಚ್ಚ ನ್ಯಾಯಾಲಯ ಬೆಂಗಳೂರು ಇಲ್ಲಿ ದಾಖಲಾದ ಕ್ರಿಮಿನಲ್ ಅರ್ಜಿ ಸಂಖ್ಯೆ: 9803/2022ರಲ್ಲಿನ ಅಂತಿಮ ತೀರ್ಪಗೆ ಒಳಪಟ್ಟಿರುತ್ತದೆ.
2. ಕೌನ್ಸಿಲಿಂಗ್ ಮೂಲಕ ಸ್ಥಳ ಆಯ್ಕೆ ಮಾಡಿಕೊಂಡಿರುವುದರಿಂದ ಬಡ್ತಿ ಹೊಂದಿದ ಸದರಿ ಅಧಿಕಾರಿಗಳು ಯಾವುದೇ ರೀತಿಯ ವರ್ಗಾವಣೆ ಭತ್ಯೆ ಹಾಗೂ ಸೇರುವ ಕಾಲಕ್ಕೆ ಅರ್ಹರಿರುವುದಿಲ್ಲ.
3. ನಿಗಧಿಪಡಿಸಿದ ಎಲ್ಲಾ ಇಲಾಖಾ ಪರೀಕ್ಷೆಗಳನ್ನು ತೇರ್ಗಡೆ ಹೊಂದಿರುವ ಬಗ್ಗೆ ಕಛೇರಿಯ ಮುಖ್ಯಸ್ಥರು ಸೂಕ್ತ ದಾಖಲೆಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು.
4. ಸದರಿ ನೌಕರರ ಮೇಲೆ ಶಿಸ್ತು ಪ್ರಕರಣ/ ಇಲಾಖಾ ವಿಚಾರಣೆ/ ನ್ಯಾಯಾಂಗ ಪ್ರಕರಣ ಬಾಕಿ ಇರುವಂತಿಲ್ಲ. ಇದನ್ನು ಖಚಿತಪಡಿಸಿಕೊಳ್ಳತಕ್ಕದ್ದು.
5. ಈ ಆದೇಶದ ದಿನಾಂಕದಿಂದ 15 ದಿನಗಳ ಒಳಗಾಗಿ ಸ್ಥಳ ನಿಯುಕ್ತಿಗೊಳಿಸಿದ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗುವುದು, ತಪ್ಪಿದ್ದಲ್ಲಿ ನಿಯಮಾನುಸಾರ ಅಂತಹ ಅಧಿಕಾರಿ/ ನೌಕರರನ್ನು ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು. ಮುಂದುವರೆದು, ಈ ಕುರಿತು ಸಂಬಂಧಿಸಿದ ಕಛೇರಿ ಮುಖ್ಯಸ್ಥರು ಬಿಡುಗಡೆಗೊಂಡ ಹಾಗೂ ಹಾಜರಾದ ಬಗ್ಗೆ ವರದಿಗಳನ್ನು ಸಂಬಂಧಿಸಿದ ಎಲ್ಲಾ ಪ್ರಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

Digitally Signed by Dr.
Akash S
Date: 16-02-2024 18:42:13
Reason: Approved

**(ಡಾ: ಆಕಾಶ್ .ಎಸ್,** ಭಾ.ಆ.ಸೇ.,)
ಅಪರ ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ

ಪ್ರತಿಗಳನ್ನು:

1. ಮಹಾಲೇಖಪಾಲರು, ಕರ್ನಾಟಕ ರಾಜ್ಯ, ಬೆಂಗಳೂರು-1.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1.
3. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು/ ಧಾರವಾಡ.
4. ಮಹಾ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು.
5. ಸಂಬಂಧಿಸಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
6. ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರುಗಳಿಗೆ.
7. ಸಂಬಂಧಿಸಿದ ಪ್ರಾಂಶುಪಾಲರು, ಜಿಲ್ಲಾ ತರಬೇತಿ ಸಂಸ್ಥೆ ರವರಿಗೆ.
8. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
9. ಸಂಬಂಧಪಟ್ಟ ಕಛೇರಿ ಮುಖ್ಯಸ್ಥರು/ ಸಂಬಂಧಿಸಿದ ನೌಕರರಿಗೆ.
10. ಈ ಕಛೇರಿಯ ಇ-ಆಡಳಿತ ಘಟಕಕ್ಕೆ ನೀಡುತ್ತಾ, ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮವಹಿಸುವಂತೆ ತಿಳಿಸಲಾಗಿದೆ.
11. ಕಛೇರಿ ಕಡತಕ್ಕೆ.